ಎರಡು ಮೂರು ವರ್ಷಗಳಲ್ಲಿ ರೇಟ್ಸ್ ಜಾಸ್ತಿಯಾಗುತ್ತದೆ. ಪದೇ ಪದೇ ರೇಟ್ಸ್ ಜಾಸ್ತಿ ಮಾಡಿ ಕೊಡುತ್ತೀರಾ ? ಅಥವಾ ಟೆಂಡರ್ ಪ್ರಕಾರ ಮಾಡಿಕೊಡಬೇಕು ಎಂದು ತಿಳಿಸುತ್ತೀರಾ ?

ಶ್ರೀ ಕೆ. ಲಕ್ಕಪ್ಪ.—ಪದೇ ಪದೇ ರೇಟ್ಸ್ ಜಾಸ್ತಿ ಮಾಡಿ ಕೊಡಬೇಕಾದ ಸಂಭವ ಇರುವುದಿಲ್ಲ. ಒಂದು ವೇಳೆ ಏನಾದರೂ ಆದರೆ, ಸ್ವಲ್ಪಮಟ್ಟಿಗೆ ಸುದಾರಿಸಿಕೊಂಡು ಹೋಗಬೇಕಾಗುತ್ತದೆ. ಸ್ವಲ್ಪಮಟ್ಟಿಗೆ ಹೆಚ್ಚು ಟೈಂ ಕೊಟ್ಟರೆ ಕೆಲಸ ಮಾಡುತ್ತಾರೆ. ಹಾಗೇನಾದರೂ ಫೇಲ್ ಆದರೆ ಪೆನಾಲ್ಟೀ ಹಾಕಿ ಕೆಲಸ ಮಾಡಬೇಕಾಗುತ್ತದೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಕರ್ನಾಟಕ ಕನ್‌ಸ್ಟ್ರಕ್ಷನ್ ಕಂಪನಿ ಮತ್ತು ಕರ್ನಾಟಕ ಟ್ರೇಡರ್ಸ್ ಕಂಪನಿ ಇವೆರಡಕ್ಕೂ ಸಂಬಂಧ ಇದೆಯೇ ? ಪಿ. ಡಬ್ಲ್ಯೂ. ಡಿ. ಇಂದ ತೆಗೆದುಕೊಂಡ ಕಂಟ್ರಾಕ್ಟ್ ಕೆಲಸ ಇವರು ಇರತಕ್ಕ ಎಸ್ಟಿಮೇಟ್‌ನಲ್ಲಿ, ನಿಗದಿಮಾಡಿದ ಅವಧಿಯಲ್ಲಿ ಮುಗಿಸಿರತಕ್ಕಂಥ ಒಂದು ನಿದರ್ಶನ ಇದೆಯೇ ? ಇವತ್ತು ಬೇಕಂತಲೇ ಕಾಲ ಮುಂದಕ್ಕೆ ತಳ್ಳಿ ಕೆಲಸದ ರೇಟ್ಸ್ ರಿವೈಜ್ ಮಾಡಿ ಹೆಚ್ಚು ಹಣ ಪಡೆದಿರತಕ್ಕಂಥಾದ್ದು ಸರಕಾರದ ಗಮನಕ್ಕೆ ಬಂದಿದೆಯೆ ? ಚಿಕ್ಕಮಗಳೂರಿನಲ್ಲಿ 13 ಲಕ್ಷದ ಒಂದು ಕೆರೆಯ ಕೆಲಸ ಇವರು ಮುಗಿಸದೇ ಇದ್ದದ್ದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಲಕ್ಕಪ್ಪ.—ಈ ಪ್ರಶ್ನೆ ಇದರಲ್ಲಿ ಉದ್ಭವವಾಗುವುದಿಲ್ಲ. ಕೆರೆಗೆ ಸಂಬಂಧಪಟ್ಟ ಬೇರೆ ಪ್ರಶ್ನೆ ಕೇಳಿದರೆ ವಿವರ ಕೊಡುತ್ತೇನೆ.

ಶ್ರೀ ಎಂ. ನಾಗಪ್ಪ.—9 17 ಲಕ್ಷ ರೂಪಾಯಿಗೆ ಈ ಕಂಟ್ರಾಕ್ಟ್ ತೆಗೆದುಕೊಂಡಿದ್ದಾರೆ. ಇದು ಎಸ್ಟಿಮೇಟೆಡ್ ಕಾಸ್ಟ್‌ಕಿಂತ ಎಷ್ಟು ಕಡಿಮೆ ಇದೆ ? 21 ತಿಂಗಳು ಅವಧಿ ಎಂದು ಕಂಟ್ರಾಕ್ಟ್‌ನಲ್ಲಿ ನಿಗದಿ ಮಾಡಿದ್ದೀರಿ. ಈಗಾಗಲೇ 1,10,026 ರೂ. ಅವರಿಗೆ ಕೊಟ್ಟಿದ್ದೀರಿ. ಇನ್ನೂ ಸುಮಾರು 8 ಲಕ್ಷ ರೂ. ಕೆಲಸ ಉಳಿದಿದೆ. ಈಗ ಉಳಿದಿರುವ 10 ತಿಂಗಳ ಅವಧಿಯಲ್ಲಿ ಈ ಕೆಲಸ ಮುಗಿಯುವುದಿಲ್ಲ ಎಂದು ಸರಕಾರ ತಿಳಿದಿದೆಯೇ ? ಹಾಗೆ ತಿಳಿದುಕೊಂಡಿದ್ದರೆ ಈ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಕೆ ಲಕ್ಕಪ್ಪ.—ಎಸ್ಟಿಮೇಟೆಡ್ ರೇಟಿಗಿಂತ 1.22 ಮಾತ್ರ ಎಕ್ಸಸ್ ಇದೆ. ಅವರದೇ ರೋಯೆಲ್ಟಿ ಟೆಂಡರ್ ಆಗಿತ್ತು. ಇರುವ ಹತ್ತು ತಿಂಗಳ ಅವಧಿಯಲ್ಲಿ ಹೆಚ್ಚಿನ ಪ್ರಯತ್ನ ಮಾಡಿ ಕೆಲಸ ಮುಗಿಸುವ ಸಾಧ್ಯತೆ ಇದೆ. ಒಂದು ವೇಳೆ ಈ ಅವಧಿಯಲ್ಲಿ ಕೆಲಸ ಮಾಡದೇ ಇದ್ದರೆ ನೋಟೀಸ್ ಕೊಟ್ಟು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಕರ್ನಾಟಕ ಟ್ರೇಡರ್ಸ್ ಇವರಿಗೆ ಕೆಲಸ ಕೊಟ್ಟಿರುವುದರಲ್ಲಿ ಎಲ್ಲಾ ಕಡೆ ಅವರು ಕೈ ಕೊಡುತ್ತಾರೆ. 9.17 ಲಕ್ಷದ್ದು ರೋಯೆಲ್ಟಿ ಟೆಂಡರ್ ಆಗಿತ್ತು ಎಂದು ಹೇಳಿದಿರಿ. ಇನ್ನೂ ಸುಮಾರು 8 ಲಕ್ಷ ಕೆಲಸ ಆಗಬೇಕಾಗಿದೆ. ಈಗ ಕಾಸ್ಟ್ ಜಾಸ್ತಿ ಆಗಿದೆ ರಿವೈಜ್ಡ್ ಎಸ್ಟಿಮೇಟ್ ಮಾಡಬೇಕು ಎಂದು ಕೇಳಿದರೆ ರಿವೈಜ್ಡ್ ಎಸ್ಟಿಮೇಟ್ ಪ್ರಕಾರ ಕೊಡುವುದಕ್ಕೆ ಆಗುತ್ತದೆಯೇ ?

ಶ್ರೀ ಕೆ. ಲಕ್ಕಪ್ಪ.—ರಿವೈಜ್ ಮಾಡತಕ್ಕಂಥ ಪರಿಸ್ಥಿತಿ ಇಲ್ಲ.

Krishna Water Disputes

315. **Sri H. N. NANJE GOWDA** (Arkalgud) :—

Will the Chief Minister be pleased to state.—

(*a*) the staze at which the Krishna water dispute stands ;

(*b*) whether a copy of the pleading would be placed on the Table of the House ;

(*c*) the action taken by Government to expedite the work of Upper–Krishna Project and the progress made, if any, in that behalf ?

Sri VEERENDRA PATIL (Chief Minister).—

(*a*) That statements and rejoinders have been filed. The Tribunal have settled the issues. The actual hearing of the case may be taken up from July 1970.

(*b*) No.

(*c*) (i) *Narayanapur Dam*:

The works on main dam, the left bank Earth Dam and Central spillway-Concrete and Non-Spillway Masonry Dam have been started and are in progress. The works on right bank Earth dam will be started shortly.

(ii) *Narayanapur Left Bank Canal*:

Work on initial 10 miles length has been started and is in progress.

(iii) *Almatti Dam*:

Tender received for construction of the Dam under consideration.

ಶ್ರೀ ಎಚ್. ಎನ್. ನಂಜೇಗೌಡ.—ಈ ವ್ಯವಹಾರ ಎಂದು ಮುಗಿಯುತ್ತದೆ ಮತ್ತು ಎಂದು ಇದರ ಅವಾರ್ಡ್ ಬರುತ್ತದೆಂಬುದನ್ನು ಹೇಳುವುದಕ್ಕಾಗುತ್ತದೆಯೇ?

† ಶ್ರೀ ವೀರೇಂದ್ರ ಪಾಟೀಲ್.—ಅದು ಯಾವಾಗ ಮುಗಿಯುತ್ತದೆಂಬುದನ್ನು ಹೇಳುವುದಕ್ಕಾಗುವುದಿಲ್ಲ. ಆದರೆ ಅದರ ರೆಗ್ಯುಲರ್ ಹಿಯರಿಂಗ್ ಬರುವ ಜುಲೈನಲ್ಲಿ ಪ್ರಾರಂಭವಾಗ ಬಹುದೆಂದು ಹೇಳುತ್ತೇನೆ.

ಶ್ರೀ ಎಚ್. ಎನ್. ನಂಜೇಗೌಡ.—ನರ್ಕಾರದವರು ಅಲ್ಲಿ ನಮ್ಮ ವಾದವನ್ನು ಮಂಡಿಸತಕ್ಕ ಬಗ್ಗೆ ಏನು ಸ್ಟಾಂಡನ್ನು ತೆಗೆದುಕೊಂಡಿದ್ದಾರೆ ಮತ್ತೆ ಏನೇನು ಸಾಹಿತ್ಯವನ್ನು ತಯಾರು ಮಾಡಿ ಕೊಂಡಿದ್ದಾರೆ ಎಂಬುದನ್ನು, ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯನ್ನು ತಮ್ಮ ಕಾನ್‌ಫಿಡೆನ್ಸಿಗೆ ತೆಗೆದುಕೊಂಡು ತಿಳಿಸುವುದಕ್ಕೆ ಸಾಧ್ಯವೇ? ಆ ನಿಲುವನ್ನು ಸಭೆಗೆ ತಿಳಿಸಿದರೆ ಸಭೆಯವರೂ ಕೂಡ ಅದಕ್ಕೆ ಇನ್ನೂ ಸಚ್ಚಿನ ಮಾಹಿತಿಗಳನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲವೇ?

ಶ್ರೀ ವೀರೇಂದ್ರ ಪಾಟೀಲ್.—ಆ ವಿಷಯ ಇದೇ ಸಭೆಯಲ್ಲಿ ಈಗಾಗಲೆ ಸಾಕಷ್ಟು ಚರ್ಚೆ ಯಾಗಿದೆ. ಅವುಗಳ ಬಗ್ಗೆ ಅನೇಕ ರೆಸಲ್ಯೂಷನ್‌ಗಳನ್ನೂ ಕೂಡ ಪಾಸ್ ಮಾಡಿ ಆಗಿದೆ. ಆದರೆ, ಆ ಕೃಷ್ಣಾ ಮತ್ತು ಗೋದಾವರಿ ಬೇಸಿನ್‌ನಲ್ಲಿ ಇರತಕ್ಕ ಜನರಿಗೆ ಏನು ಅನುಕೂಲವಾಗಬೇಕೋ ಆ ಸ್ಟಾಂಡನ್ನು ತೆಗೆದುಕೊಂಡಿದೆ.

ಶ್ರೀ ಎಸ್. ಎನ್. ಅರಕೇರಿ.—ನಾನು ಹಿಂದೆ ಆ ಸ್ಥಳಕ್ಕೆ ಹೋಗಿದ್ದೆ. ಆಗ ಅಲ್ಲಿ ಕೆಲಸ ಮಾಡುತ್ತಿದ್ದ ಕಂಟ್ರಾಕ್ಟರನ್ನು ಬಿಟ್ಟು ಈಗ ಬೇರೆಯವರಿಗೆ ಕೆಲಸವನ್ನು ಕೊಡುವುದಕ್ಕೇನು ಕಾರಣ?

1-30 P.M.

ಶ್ರೀ ವೀರೇಂದ್ರ ಪಾಟೀಲ್.—ಆಗ ಅಲ್ಲಿ ಡ್ಯಾಂ ಕೆಲಸ ನಡೆಯುತ್ತಿರಲಿಲ್ಲ. ಆಗ ಅಲ್ಲಿ ಕೆಲಸ ಮಾಡುತ್ತಿದ್ದವರೆಲ್ಲಾ ಸಣ್ಣ ಸಣ್ಣ ಕಂಟ್ರಾಕ್ಟರುಗಳು ಮಾತ್ರ. ಅಂಥವರಿಗೆ ಈ ದೊಡ್ಡ ಕೆಲಸ ಗಳನ್ನು ಕೊಡುವುದಕ್ಕಾಗುವುದಿಲ್ಲ. ಇದನ್ನೆಲ್ಲಾ ರೆಪ್ಯುಟೆಡ್ ಕಂಟ್ರಾಕ್ಟರಿಗೇ ಕೊಡಬೇಕಾಗಿದೆ. ಅದಕ್ಕಾಗಿ ಟೆಂಡರನ್ನು ಕರೆದಿದೆ. ಇನ್ನೂ ವಿಲೇವಾರಿಯಾಗಿಲ್ಲ.

ಶ್ರೀ ಬಾಪೂಗೌಡ.—ಅಲ್ಲಿಯ ಜನರಿಗೆ ಆ ಡ್ಯಾಮುಗಳ ನೀರನ್ನು ಕೊಡಪುದಕ್ಕೆ ಇನ್ನು 15 ವರ್ಷಗಳಲ್ಲಾದರೂ ಸಾಧ್ಯವಾಗುತ್ತದೆಯೇ?

ಶ್ರೀ ವೀರೇಂದ್ರ ಪಾಟೀಲ್.—ಅದಕ್ಕೂ ಮೊದಲೇ ನೀರನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಚ್. ಎನ್. ನಂಜೇಗೌಡ.—ನಾರಾಯಣಪುರ ಡ್ಯಾಂ ಮತ್ತು ಅದರ ಎಡನಾಲೆಯ ಕೆಲಸಗಳನ್ನು ಯಾರಿಗೆ ವಹಿಸಲಾಗಿದೆ ಮತ್ತು ಅಲ್ಯಟ್ಟಿ ಕೆಲಸಕ್ಕೆ ಎಷ್ಟು ಜನರು ಟೆಂಡರನ್ನು ಹಾಕಿದ್ದರು ?

ಶ್ರೀ ವೀರೇಂದ್ರ ಪಾಟೀಲ್.—ಆ ವಿವರಗಳು ಈಗ ನನ್ನಲ್ಲಿಲ್ಲ.

ಶ್ರೀ ಎಂ. ನಾಗಪ್ಪ.—ಅಪ್ಪರ್ ಕೃಷ್ಣಾ ಬಲದಂಡೆಯ ನಾಲೆ ಕೆಲಸವನ್ನು ನಿರ್ವಹಿಸಲಾಗಿದೆಯೇ ಎಸ್ಟಿಮೇಟ್ ತಯಾರಾಗಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಅದು ಒಂದನೇ ಸ್ಟೇಜಿನಲ್ಲಿ ಬರುವುದಿಲ್ಲ. ಅದು ಎರಡನೇ ಸ್ಟೇಜಿನಲ್ಲಿ ಬರುತ್ತದೆ.

ಶ್ರೀ ಕೆ. ನಂಗನಗೌಡ.—ನರ್ಕಾರದವರು ಈ ಕೆಲಸವನ್ನು ಮೈಸೂರು ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ನಿನವರಿಗೆ ಕೊಟ್ಟಿದ್ದರೆ ಅವರು ಅದನ್ನು ಬೇರೆಯವರಿಗೆ ಸಬ್ ಕಂಟ್ರಾಕ್ಟ್ ಕೊಟ್ಟಿದ್ದಾರೆಂಬ ವದಂತಿ ಇದೆ. ಅದು ನರ್ಕಾರಕ್ಕೆ ಗೊತ್ತಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಆ ವಿಚಾರ ನಮಗೆ ಗೊತ್ತಿಲ್ಲ. ಆದರೆ ಈಗ ಆ ಕಾರ್ಪೊರೇಷನ್ನಿನ ಛೇರ್ಮನ್ನರು ಬದಲಾವಣೆಯಾಗಿದ್ದಾರೆಂದು ತಿಳಿದುಬಂದಿದೆ.

Mr. DEPUTY SPEAKER.—Question No. 328 and 414 may be taken up together.

Resignation of a Member of Resources Committee

328. Sri T. P. BORAIAH (Bannur).—

Will the Minister for Finance, Planning and Youth Welfare be pleased to state.---

(*a*) whether it is a fact that a member of the State Resources Committee is going to tender his resignation to the membership of the said Committee ;

(*b*) if so, the reason given by him for his resignation ?

Sri RAMAKRISHNA HEGDE (Minister for Finance, Planning and Youth Welfare).—

(*a*) Yes.

(*b*) He has mentioned that the Government has not considered the recommendation made by the Committee in its interim report and taken action in respect of savings, starting of new works and increasing the tempo of the works in progress.

Resignation of a member of Resources Committee

414. Sri N. A. CHANNE GOWDA (Pandavapura) :—

Will the Minister for Finance, Planning and Youth Welfare be pleased to state:—

(*a*) whether any member of the Resources Committee resigned recently ;